ಚಾಮರಾಜನಗರದ ಕಂದಾಯ ಇಲಾಖೆಯ ಸಿಬ್ಬಂದಿ ವಿರುದ್ಧ ಮೊಕದ್ದಮೆ.

544 (3745)

ಶ್ರೀ ಎ.ಆರ್.ಕೃಷ್ಣಮೂರ್ತಿ (ಸಂತೇಮಾರನಹಳ್ಳಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ತಾಲ್ಲೂಕು ತಹಸೀಲ್ದಾರ್‌ರವರು ಹಾಗೂ ಸಿಬ್ಬಂದಿ ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತರ ಬಲೆಗೆ ಸಿಕ್ಕಿ ಹಾಕಿಕೊಂಡಿದ್ದು ನಿಜವೇ? ಹಾಗಿದ್ದಲ್ಲಿ ಯಾವ ಸ್ಥಳದಲ್ಲಿ ಇವರನ್ನು ಹಿಡಿಯಲಾಯಿತು?

ಆ) ಸದರಿ ತಹಸೀಲ್ದಾರ್ ಹಾಗೂ ಸಿಬ್ಬಂದಿ ಮೇಲೆ ಈ ಸಂಬಂಧವಾಗಿ ಏನಾದರೂ ಕ್ರಿಮಿನಲ್ ಮೊಕ್ಕದ್ದಮೆ ದಾಖಲಾಗಿದೆಯೇ? ಹಾಗಿದ್ದಲ್ಲಿ ಅದು ಯಾವ ಹಂತದಲ್ಲಿದೆ? (ವಿವರಣೆ ನೀಡುವುದು)

ಇ) ಈ ಲಂಚ ಪ್ರಕರಣದಲ್ಲಿ ಭಾಗಿಯಾಗಿದ್ದವರ ಸಂಖ್ಯೆ ಎಷ್ಟು? ಅವರ ಪದನಾಮವೇನು?

ಈ) ನಾಗರೀಕ ಸೇವಾ ನಿಯಮ 1957 ಕಲಂ 10ರ ರೀತ್ಯಾ ಲಂಚ ಪ್ರಕರಣದಲ್ಲಿ ಭಾಗಿಯಾಗಿದ್ದವರ ಎಲ್ಲರ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ? ಇಲ್ಲದೇ ಇದ್ದಲ್ಲಿ ಯಾರ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ ಹಾಗೂ ಯಾರ ಮೇಲೆ ಕ್ರಮ ಕೈಗೊಂಡಿಲ್ಲ? ಅವರ ಮೇಲೆ ಈವರೆಗೆ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣಗಳೇನು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ಹೌದು ದಿನಾಂಕ: 2-5-98 ರಂದು ಚಾಮರಾಜ ನಗರ ಪರಿವೀಕ್ಷಣಾ ಮಂದಿರದಲ್ಲಿ ಹಿಡಿಯಲಾಯಿತು.

ಆ) ದಾಖಲು ಮಾಡಲು ಸಿಆಸು ಇಲಾಖೆಗೆ ಬರೆಯಲಾಗಿದೆ. ಚಾಮರಾಜನಗರ ಜಿಲ್ಲಾಧಿಕಾರಿಗಳಿಗೂ ಬರೆಯಲಾಗಿದೆ.

ಇ) ಎರಡು

1) ಶ್ರೀ ಜಿ.ಶಿವರುದ್ರಸ್ವಾಮಿ ಶಾಖಾಧಿಕಾರಿಗಳು ಇವರು ನಿಯೋಜನೆ ಮೇರೆಗೆ ತಹಸೀಲ್ದಾರ್ ಚಾಮರಾಜನಗರ ತಾಲ್ಲೂಕು ಕಛೇರಿ.

2) ಶ್ರೀ ವೀರಭದ್ರಯ್ಯ, ಕಂದಾಯ ನಿರೀಕ್ಷಕರು, ಚಾಮರಾಜನಗರ.

ಈ) ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮ 1957 10ರಡಿಯಲ್ಲಿ ಶ್ರೀ ವಿರಭದ್ರಯ್ಯ ಕಂದಾಯ ನಿರೀಕ್ಷಕರು ಇವರನ್ನು ದಿನಾಂಕ: 17-8-98ರಂದು ಅಮಾನತ್ತುಗೊಳಿಸಲಾಗಿದೆ. ಶ್ರೀ ಶಿವರುದ್ರಸ್ವಾಮಿ.ಜಿ. ಇವರು ಸಚಿವಾಲಯದ ಸೇವೆಗೆ ಒಳಪಟ್ಟ ಶಾಖಾಧಿಕಾರಿಯಾಗಿರುವುದರಿಂದ ಇವರ ಸೇವೆಯನ್ನು ಸಿಆಸುಇಗೆ ಹಿಂದುರುಗಿಸಲಾಗಿದೆ.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಖರೀದಿಸಲಾಗಿರುವ ಬಸ್ಸುಗಳು.

545: (3853)

ಶ್ರೀ ಆರ್.ಅಶೋಕ್ (ಉತ್ತರಹಳ್ಳಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಇದುವರೆಗೆ ಖರೀದಿಸಲಾಗಿರುವ ವೋಲ್ವೋ ಬಸ್ಸುಗಳ ಸಂಖ್ಯೆ ಎಷ್ಟು ?

2) ಅವುಗಳನ್ನು ಯಾವ ದರದಲ್ಲಿ ಖರೀದಿಸಲಾಗಿದೆ.

3) ಲೇಲ್ಯಾಂಡ್, ಟಾಟಾ ಹಾಗೂ ವೋಲ್ವೋ ಬಸ್ಸುಗಳ ಖರೀದಿಗಾಗಿ ಸರ್ಕಾರ ಕೊಡುತ್ತಿರುವ ದರವೇನು.

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

1) ಇದುವರೆವಿಗೆ ಯಾವುದೇ ವೋಲ್ವೋ ಬಸ್ಸನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಖರೀದಿಸಿರುವುದಿಲ್ಲ.

2) ಉದ್ಭವಿಸುವುದಿಲ್ಲ.

3)

	ದರ ರೂ. ಪೈ
ಲೇಲ್ಯಾಂಡ್ ಛಾಸಿ ಬೆಲೆ	5,34,260.57
ಟಾಟಾ ಛಾಸಿ ಬೆಲೆ	4,92,850.37
ವೋಲ್ವೋ ಛಾಸಿ ಬೆಲೆ	ಖರೀದಿಸಿಲ್ಲ.